ಹೆಚ್ಚುಗಾರಿಕೆ ಎಂದು ಆ ವಯಸ್ಸಿನಲ್ಲಿ ಅರ್ಥವಾಗದ ಪ್ರಶ್ನೆ ಬೆಳೆಯುತ್ತಾ ಬಂದಂತೆ ಅಣ್ಣ, ತಂಗಿಯರನ್ನು ಕಾಡತೊಡಗಿತ್ತು.

ಅಮ್ಮನ ಎದುರು ಇಂತಹ ಸೂಕ್ಷ್ಮ ವಿಷಯಗಳನ್ನು ಮಾತಾಡುವಂತಿಲ್ಲ. ಹೀಗೆ ವಿಚಾರ ಮಾಡುವುದೇ ಅವಳ ದೃಷ್ಟಿಯಲ್ಲಿ ಮಹಾಪಾಪ. ಗಂಡನನ್ನು ಕಳೆದುಕೊಂಡಾಗ ಕಮಲಾಕ್ಷಿಗೆ ಮೂವತ್ತೆರಡರ ಏರು ಪ್ರಾಯ. ಮಗ ಪ್ರೈಮರಿಗೆ ಹೋಗುತ್ತಿದ್ದರೆ ಮಗಳು ನಾಲ್ಕು ವರ್ಷದ ಎಳೆ ಬಾಲೆ. 'ಬಾ ಇಲ್ಲಿಗೇ, ಅನ್ನ ತಿನ್ನುವಲ್ಲಿ ಗಂಜಿ ಕುಡ್ಕಂಡು ಬದುಕು ಮಾಡೋಣ. ಹೇಗೂ ನಿನ್ನ ಪಾಲಿನ ಆಸ್ತಿ ಇದ್ದೇ ಇರುತ್ತೆ. ನಿನ್ನ ಬಾವ ನೋಡ್ಕಳ್ಳಿ. ವರ್ಷಕ್ಕಿಂತಿಷ್ಟು ಅಂತ ಪಂಚಾಯ್ತಿ ಮಾಡ್ಕಂಡ್ರಾಯ್ತು. ಅಥವಾ ಕೊಂಡುಕೊಳ್ತಾರೆ ಅಂದ್ರೆ ಅವರಿಗೇ ಮಾರಿ, ದುಡ್ಡು ಬ್ಯಾಂಕಲ್ಲಿಟ್ಟು, ಬಡ್ಡಿ ದುಡ್ಡು ಮೂರು ಜನಕ್ಕೆ ಬೇಕಾದಷ್ಟಾಗುತ್ತೆ...' ಎಂದು ಅಣ್ಣ ಹೇಳಿದ್ದು ಆ ಸಂದರ್ಭದಲ್ಲಿ ಕಮಲಾಕ್ಷಿಗೆ ಪಥ್ಯವಾಗಿ ಕಂಡಿತ್ತು. ಕಮಲಾಕ್ಷಿ ಗಂಟು ಮೂಟೆ ಕಟ್ಟಿಕೊಂಡು ಅಣ್ಣನ ಬೆನ್ನು ಬಿದ್ದು ಹೊರಟೇಬಿಡುತ್ತಿದ್ದಳೇನೋ.



ಬಾವ ಹೇಳಿದ್ದರು, 'ನಿನ್ನ ಬದುಕು, ನಿನ್ನ ನಿರ್ಧಾರ. ತವರು ಸೇರ್ಕಂಬೇಡ ಅಂತ ನಾನು ಹೇಳಲ್ಲ. ಹಾಗೆ ಹೇಳೋ ಅಧಿಕಾರಾನೂ ನಂಗಿಲ್ಲ. ನಿಮ್ಮ ಪಾಲಿಗೆ ನ್ಯಾಯವಾಗಿ ಏನು ಸಲ್ಲಬೇಕೋ ಅದನ್ನ ನಿರ್ವಂಚನೆಯಿಂದ ಸಲ್ಲಿಸ್ತೀನಿ..'

'...'

'ಒಂದು ಮಾತು ನೆನಪಿರ್ಲಿ ಕಮಲಾಕ್ಷಿ. ನಾನು ಈ ಮಾತು ಹೇಳ್ಬೇಕಾದ್ದೇನಿಲ್ಲ. ಆದರೆ, ಹೇಳದಿದ್ರೆ ಅಂತರಾತ್ಮಕ್ಕೆ ದ್ರೋಹ ಮಾಡ್ಕೊಂಡ ಹಾಗಾಗುತ್ತೆ'

ಏನು? ಎನ್ನುವಂತೆ ಕಮಲಾಕ್ಷಿ ಕತ್ತೆತ್ತಿ ಬಾವನ ಮುಖ ನೋಡಿದ್ದಳು.

'ಈ ಕನಿಕರ, ಅಯ್ಯೋ ಪಾಪ ಅನ್ನೋದೆಲ್ಲಾ ತುಂಬಾ ದಿನ ಬಾಳಿಕೆ ಬರಲ್ಲ. ಎಷ್ಟಾದ್ರೂ ಅದು ನಿನ್ನ ಹಕ್ಕಿನ ಮನೆ ಅಲ್ಲ. ನಿನ್ನ ದುಡ್ಡು ಅಂತಾದ್ರೂ ಪರಾಶ್ರಯ ಅನ್ನೋ ಅಳುಕು, ಹಿಂಜರಿಕೆ ಇದ್ದೇ ಇರುತ್ತೆ. ಅಪ್ಪ, ಅಣ್ಣ, ಅಮ್ಮ ಎಲ್ಲಾ ಸಮ. ಅತ್ತಿಗೇನೂ ಇದಾಳಲ್ವಾ? ಅದು ಅವರ ಮನೇನೇ ಹೊರತು ನಿನ್ನ ಮನೆ ಆಗಲ್ಲ' ಬಾವ ಎಷ್ಟು ನಾಜೂಕಾಗಿ ಎಲ್ಲವನ್ನೂ ಮನವರಿಕೆ ಮಾಡಿಕೊಟ್ಟರು ಅಂದರೆ ಹೌದು ಅನಿಸಿತ್ತು ಕಮಲಾಕ್ಷಿಗೆ. ಗಂಡ ಇಲ್ಲದಿದ್ದರೇನಂತೆ, ಈ ಮನೆ ತನ್ನ ಹಕ್ಕಿನ ಮನೆ. ಮಾರಿಯೋ, ತೂರಿಯೋ ಇಲ್ಲಿಂದ ಕಳಚಿಕೊಂಡರೆ ಆ ದುಡ್ಡಿನ ವೈವಾಟು ನಡೆಸಬೇಕಾದವನು ಅಣ್ಣ. ಬ್ಯಾಂಕಲ್ಲಿಡುವುದೋ, ಬಡ್ಡಿ ತೆಗೆದುಕೊಳ್ಳುವುದೋ ಎಲ್ಲಕ್ಕೂ ಬೇಕು ಅವನ ಮೇಲ್ವಿಚಾರಣೆ. ದಡ್ಡಿ ತಾನು. ಬೇಕಾದಾಗಲೆಲ್ಲಾ ಪೇಟೆಗೆ ಹೋಗಿ ಬ್ಯಾಂಕಿನ ವ್ಯವಹಾರ ಮಾಡಿಕೊಂಡು ಬರುವಷ್ಟು ಧೈರ್ಯಸ್ಥೆ ಅಲ್ಲ. ಧೈರ್ಯ ಇದೆ ಅಂದುಕೊಂಡರೂ, ಎಲ್ಲಾ ಕಲಿಯುತ್ತೇನೆ ಎಂದು ನಂಬಿಸಿಕೊಂಡರೂ, ಏನೆಂದುಕೊಳ್ಳುತ್ತಾನೆ ಅಣ್ಣ? ತನ್ನ ಮೇಲೆ ತಂಗಿಗೆ ನಂಬಿಕೆ ಇಲ್ಲ ಎನ್ನುವ ಹುಳು ಅವನ ತಲೆ ಹೊಕ್ಕರೆ ಸಾಕಲ್ಲ? ಆಡುವಂತಿಲ್ಲ, ಅನುಭವಿಸುವಂತಿಲ್ಲದ ಬಿಸಿ ತುಪ್ಪ ಆಗಿ ಕೂರುತ್ತದೆ ಬದುಕು. ಬಾವ ಹೇಳಿದ ಹಾಗೆ ಇದು ತನ್ನ ಹಕ್ಕಿನ ಮನೆ. ಅದು ಹಂಗಿನ ಮನೆ.

'ಆಯ್ತು ಬಾವ, ನೀವು ಹಿರೀರು. ನಿಮ್ಮ ಮಾತು ತೆಗೆದು ಹಾಕಲ್ಲ. ನಿಮ್ಮ ನೆರಳಲ್ಲಿ ಇದ್ಬಿಡ್ತೀನಿ...' ಎನ್ನುವ ಮಾತು ಕಮಲಾಕ್ಷಿಯ ಬಾಯಿಂದ ಉದುರಿತ್ತು.

'ಇದರಲ್ಲಿ ನನ್ನ ಸ್ವಾರ್ಥ ಏನಿಲ್ಲ. ಎಲ್ಲಾ ನಿಮ್ಮ ಒಳ್ಳೇದಕ್ಕೇ...' ಅಂದಿದ್ದರು ಬಾವ. ತಪ್ಪು ಮಾಡಿದೆನಾ? ಎನ್ನುವ ಎದೆಗುದಿ ಕೆಲ ಕಾಲ ಕಾಡಿದ್ದು ಹೌದು. ಅಲ್ಲಿ ವ್ಯವಹಾರ ನೋಡಿಕೊಳ್ಳುವವನು ಅಣ್ಣನಾದರೆ ಇಲ್ಲಿ ಬಾವ. ಅವನು ನಾಮ ಹಾಕುತ್ತಾನೆ ಎಂದು ಅನುಮಾನಿಸಿದರೆ ಬಾವ ನಾಮ ಹಾಕುವುದಿಲ್ಲ ಅನ್ನುವುದಿದೆಯಾ? ಆಮೇಲೆ ಅವಳಷ್ಟಕ್ಕೆ ಕಂಡುಕೊಂಡಿದ್ದಳು ಸಮಾಧಾನ. ಅಲ್ಲಿಗೂ, ಇಲ್ಲಿಗೂ ವ್ಯತ್ಯಾಸವಿದೆ. ಇಲ್ಲಿಗೆ ಕಚ್ಚಿಕೊಂಡಿದ್ದರೆ ತಮಗೆ ಸೇರಬೇಕಾದ ಆಸ್ತಿಯನ್ನು ಪರಭಾರೆ ಮಾಡಬೇಕಾದ ತುರ್ತು ಇಲ್ಲ. ಯಾವತ್ತಿದ್ದರೂ ಅದು ತಮ್ಮ ಹೆಸರಲ್ಲಿ ಉಳಿದುಕೊಂಡಿರುತ್ತದೆ. ಮುಂದೆ ತನ್ನ ಮಕ್ಕಳಿಗೆ ಒದಗಿ ಬರುತ್ತದೆ. ದಿನಕ್ಕೊಮ್ಮೆ ತಮ್ಮದೇ ತೋಟದಲ್ಲಿ ಕಾಲಾಡಿಸಿಕೊಂಡು ಬರುವ ನೆಮ್ಮದಿ, ತಮ್ಮದೇ ಗದ್ದೆಯಲ್ಲಿ ಬೆಳೆದ ಭತ್ತದ ಅಕ್ಕಿಯನ್ನು ಉಣ್ಣುವ ತೃಪ್ತಿ ಅಲ್ಲಿ ಸಿಗಲಾರದು. ಆಯ್ತಲ್ಲ, ಇನ್ನು ಈ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು ಎಂದು ಗಟ್ಟಿ ನಿರ್ಧಾರ ಮಾಡಿದ್ದಳು ಕಮಲಾಕ್ಷಿ.

***

ವಾರಗಿತ್ತಿಯೊಂದಿಗೆ ಯಾವುದೇ